# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
# ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-16

Cw-37

ಸಾಕ್ಷಿದಾರರ ಹೆಸರುಃ ಶಿವಲಿಂಗ ಹೊಸಮನಿ

ತಂದೆಃಗಂಡನ ಹೆಸರುಃ ಪುತ್ರಶೇಖಪ್ಪ

ವಯಸ್ಸುಃ 60 ವರ್ಷ

ಉದ್ಯೋಗಃ ಪಿಎಸ್ಐ ಹಾವೇರಿ ಗ್ರಾಮೀಣ ಠಾಣೆ

ವಾಸ ಸ್ಥಳಃ ಹಾವೇರಿ

**ದಿನಾಂಕ:21.11.2024 ರಂದು ಸಾಕ್ಷಿ ಹಾಜರಿದ್ದು , ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1. ದಿನಾಂಕಃ28.08.2020 ರಿಂದ 13.11.2021 ರವರೆಗೆ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ17.03.2021 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಈ ಕೇಸಿನ ಪಿರ್ಯಾದಿದಾರರು ಠಾಣೆಗೆ ಹಾಜರಾಗಿ ದೂರು ಸಲ್ಲಿಸಿದ ಮೇರೆಗೆ ಠಾಣಾ ಗುನ್ನಾ ನಂ.27/2021 ರಲ್ಲಿ ಪ್ರಕರಣ ದಾಖಲುಮಾಡಿಕೊಂಡು ಪ್ರವವವನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತೇನೆ. ದೂರು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು ಸಾಕ್ಷಿ ಸಹಿ ನಿಪಿ-1(ಬಿ) ಮತ್ತು ಪ್ರವವನ್ನು ಈಗಾಗಲೇ ನಿಪಿ-2 ಎಂದು ಗುರ್ತಿಸಲಾಗಿದೆ.

2. ಚಾಸಾ-38 ರವರ ಆದೇಶದ ಮೇರೆಗೆ ಮೃತ ಗಣೇಶನ ಶವ ಪಂಚನಾಮೆಯನ್ನು ನಿಪಿ-11 ರಂತೆ ಮಾಡಿರುತ್ತೇನೆ. ಸಾಕ್ಷಿ ಸಹಿ ನಿಪಿ-11(ಬಿ) ಮತ್ತು ನಿಪಿ-11(ಸಿ) ಅಂತಾ ಗುರುತಿಸಲಾಯಿತು. ಶವ ಪಂಚನಾಮೆ ಕಾಲಕ್ಕೆ ನಿಪಿ-12 ರಿಂದ 14 ರಂತೆ ಪೋಟೋ ತೆಗೆಸಿರುತ್ತೇನೆ. ಘೋರ ಪ್ರಕರಣವಾದ್ದರಿಂದ ಮುಂದಿನ ತನಿಖೆಯನ್ನು ಚಾಸಾ-38 ರವರಿಗೆ ವಹಿಸಿಕೊಟ್ಟೆನು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

3. ಬೆಳಿಗ್ಗೆ 10.00 ಗಂಟೆಯವರೆಗೆ ಈ ಕೇಸಿನ ಬಗ್ಗೆ ಮಾಹಿತಿ ಬಂದಿಲ್ಲ. ಪಿರ್ಯಾದುವನ್ನು ಎಲ್ಲಿ ಬರೆದುಕೊಂಡು ಬಂದರು ಎಂದು ವಿಚಾರಣೆ ಮಾಡಿಲ್ಲ. ಘೋರ ಪ್ರಕರಣವಾದರೆ ಡೈರಿಯಲ್ಲಿ ನಮೂದಿಸಿ ಪ್ರಕರಣ ದಾಖಲು ಮಾಡುತ್ತೇವೆ. ಡೈರಿಯನ್ನು ಕೋರ್ಟಿಗೆ ಕೊಟ್ಟಿಲ್ಲ. ನಿಪಿ-2 ರಲ್ಲಿ ನಮೂದಿಸಿದ ಕಾಲಂ ನಂ.3 ಮತ್ತು 10 ರಲ್ಲಿ ಸಮಯ ಬೇರೆ-ಬೇರೆ ಇವೆ ಎಂದರೆ ಸರಿ. ತಕ್ಷಣ ಮೇಲಾಧಿಕಾರಿಗಳಿಗೆ ಮಾಹಿತಿ ಕೊಟ್ಟಿದ್ದೇನೆ. ತಕ್ಷಣ ಸ್ಥಳಕ್ಕೆ ಭೇಟಿ ನೀಡಿದ್ದೇನೆ. ನಮ್ಮ ಮೇಲಾಧಿಕಾರಿಗಳು ನನಗಿಂತ ಮೊದಲೇ ಅಲ್ಲಿ ಹಾಜರಿದ್ದರು.

4. ಪಿರ್ಯಾದುವಿನಲ್ಲಿ ಅಪರಚಿತ ವ್ಯಕ್ತಿಗಳು ಅಂತಾ ಬರೆದಿದ್ದಾರೆ ಎಂದರೆ ಸರಿ. ನಿಪಿ-11 ನ್ನು ಮಾಡುವಾಗ ಅಲ್ಲಿದ್ದ ರೂಮಿನ ಅಳತೆ ಮಾಡಿಲ್ಲ. ನಿಪಿ-12 ರಿಂದ 14 ರಲ್ಲಿ 04 ಜನ ಬಿಟ್ಟರೆ ಬೇರೆ ಯಾರೂ ಇಲ್ಲ. ಒಂದೇ ಸ್ಥಳದಲ್ಲಿ ಎರಡು ಶವದ ಪಂಚನಾಮೆಗಳನ್ನು ಒಂದೇ ವೇಳೆಯಲ್ಲಿ ಇಬ್ಬರು ತನಿಖಾಧಿಕಾರಿಗಳು ಮಾಡಲು ಆಗುವುದಿಲ್ಲ ಎಂದರೆ ಸರಿ. ನಾನು ಘಟನೆ ನಡೆದ ಸ್ಥಳಕ್ಕೆ ಬೆಳಿಗ್ಗೆ 11.00 ಗಂಟೆಗೆ ಹೋದೆ. ಶವ ಇರುವ ಸ್ಥಳದಲ್ಲಿಯೇ ಶವ ಪಂಚನಾಮೆ ಮಾಡಬೇಕಾಗುತ್ತದೆ ಎಂದರೆ ಸರಿ.

5. ನಿಪಿ-12 ರಿಂದ 14 ರಲ್ಲಿ ಇನ್ನೊಬ್ಬ ಮೃತನ ಶವ ಇಲ್ಲ. ಶವ ಪಂಚನಾಮೆಗೆ ಪಂಚರಿಗೆ ಬೆಳಿಗ್ಗೆ 11.30 ಗಂಟೆಗೆ ನೋಟೀಸು ಕೊಟ್ಟು ಕರೆದಿದ್ದೇನೆ. ಪಂಚರು ಹಾವೇರಿಯವರು. ಯತ್ತಿನಹಳ್ಳಿಯಲ್ಲಿ ಪಂಚರನ್ನು ತೆಗೆದುಕೊಳ್ಳಲು ತೊಂದರೆ ಇರಲಿಲ್ಲ. ನಿಪಿ-12 ರಿಂದ 14 ರಲ್ಲಿ ರವಿ ಕರಿಗಾರ್ ಹಾಗೂ ದೀಪಕ್ ಜನ್ನು ಅವರು ಎಂದರೆ ಸರಿ. ಪೋಟೋದಲ್ಲಿ ದಿನಾಂಕ, ಸಮಯ ಬರುತ್ತದೆ ಎಂದರೆ ಸರಿ. ಡಿಜಿಟಲ್ ಕ್ಯಾಮೆರಾ ನಮ್ಮ ಠಾಣೆಯದ್ದು. ಕೇಸಿಗೆ ಅನುಕೂಲವಾಗುವಂತೆ ಪೋಟೋ ತೆಗೆಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಎಫ್ ಐ ಆರ್ ದಾಖಲಿಸಿ, ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಶವ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.